# ಮಂಡ್ಯ ವಿಶ್ವವಿದ್ಯಾಲಯ
ಎಂ.ಸಿ ರೋಡ್, ಮಂಡ್ಯ – ೫೭೧೪೦೧

# MANDYA UNIVERSITY
M.C Road, Mandya – 571401

**Ph.No.:** 0232358788, **E-Mail** re.mum@karnataka.gov.in **Website** https://mandyauniversity.karnataka.gov.in/


**ಸಂಖ್ಯೆ:** ಮ.ವಿ.ಮಂ/ಪ.ವಿ/451/2024–25

ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ
ಆಡಳಿತ ಭವನ, ಮಂಡ್ಯ –571401
ದಿನಾಂಕ: 15–10–2024

**ಗೆ,**

ಮಂಡ್ಯ ವಿಶ್ವವಿದ್ಯಾಲಯದ ವ್ಯಾಪ್ತಿಗೆಒಳಪಡುವ
ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

**ಮಾನ್ಯರೆ,**

**ವಿಷಯ:** ಅಧ್ಯಾಪಕರ ಜೇಷ್ಠತಾ ಪಟ್ಟಿ (UGC/Non UGC Separate Gradation List) ಯನ್ನು Update ಮಾಡಲು ಅಧ್ಯಾಪಕರ ಸೇವಾ ಹಿರಿತನದ ವಿವರಗಳನ್ನು ಕಳುಹಿಸುವ ಬಗೆಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024–25ನೇ ಸಾಲಿನ ಪರೀಕ್ಷಾ ಮಂಡಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಲು ಹಾಗೂ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಸಂಬಂಧ ಅಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿರುತ್ತದೆ. ಅದುದರಿಂದ, ನಿಮ್ಮ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧ್ಯಾಪಕರುಗಳ (ಯುಜಿಸಿ) /ಆಡಳಿತ ಮಂಡಳಿ ಖಾಯಂ ಅಧ್ಯಾಪಕರುಗಳು (ನಾನ್ ಯುಜಿಸಿ) ಹೊಸದಾಗಿ ತಮ್ಮ ಕಾಲೇಜಿಗೆ ಸೇರ್ಪಡೆ/ವರ್ಗಾವಣೆಗೊಂಡು ನಿಮ್ಮಕಾಲೇಜಿಗೆ ಬಂದಿದ್ದಲ್ಲಿ, ನಿಮ್ಮ ಕಾಲೇಜಿಗೆ ವರ್ಗಾವಣೆ ಹೊಂದಿ ಬೇರೆ ಕಾಲೇಜಿಗೆ ವರ್ಗಾವಣೆ ಹೊಂದಿದಲ್ಲಿ ಅಂತಹ ಅಧ್ಯಾಪಕರುಗಳ ಪೂರ್ಣ ವಿವರಗಳನ್ನು Update ಮಾಡಲು ನಮೂನೆಯಲ್ಲಿ ಸಿದ್ದಪಡಿಸಿ ಕಳುಹಿಸಬೇಕೆಂದು ಈ ಮೂಲಕ ಕೋರಲಾಗಿದೆ. ಸೇರ್ಪಡೆ ಅಗಿದ್ದಲ್ಲಿ (03 ಮೂರು ವರ್ಷಕ್ಕಿಂತ ಮೇಲ್ಪಟ್ಟು ಸೇವಾನುಭವ ಹೊಂದಿದ್ದಲ್ಲಿ ಮಾತ್ರ) ಹಾಗೂ ನಿಮ್ಮ ಕಾಲೇಜನ್ನು ಬಿಟ್ಟ ಅಧ್ಯಾಪಕರುಗಳು / ವಯೋನಿವೃತ್ತಿ ಹೊಂದಿದ ಅಧ್ಯಾಪಕರುಗಳು/ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಅಧ್ಯಾಪಕರುಗಳ ವಿವರಗಳನ್ನು ಮಾತ್ರ ಈ ಪತ್ರದೊಂದಿಗೆ ಲಗತ್ತಿಸಿರುವ ಹೊಸ ನಮೂನೆಯಲ್ಲಿ ಭರ್ತಿ ಮಾಡಿ ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ ಬೇರೆ ನಮೂನೆಯಲ್ಲಿ ಕಳುಹಿಸಿದ್ದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.

ಕೆಲವು ಕಾಲೇಜುಗಳ ಮುಖ್ಯಸ್ಥರು ಅಧ್ಯಾಪಕರ ಸೇವಾ ವಿವರಗಳನ್ನು ಸರಿಯಾಗಿ ಕಳುಹಿಸದೆ ಮೌಲ್ಯಮಾಪನದ ಸಮಯದಲ್ಲಿ ಗೊಂದಲ ಉಂಟಾಗಿ ಕೆಲವು ಅಧ್ಯಾಪಕರು ಪರೀಕ್ಷಾ ಕಾರ್ಯದಿಂದ ವಂಚಿತರಾಗುತ್ತಿದ್ದಾರೆ. ಈ ರೀತಿ ಅಧ್ಯಾಪಕರ ಸೇವಾ ಅವಧಿಯನ್ನು ಸಮರ್ಪಕವಾಗಿ ನಮೂದಿಸದೇ ಇದ್ದಂತಹ ಪ್ರಕರಣಗಳಲ್ಲಿ ಅವರ ಸೇವಾಹಿರಿತನಕ್ಕೆ ಚ್ಯುತಿ ಉಂಟಾಗುವ ಸಂಭವವು ಸಹ ಇರುತ್ತದೆ. ಅಲ್ಲದೆ, ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರ ಹೆಸರನ್ನು ಕಳುಹಿಸುವಾಗ ಉದ್ದೇಶಪೂರ್ವಕವಾಗಿಯೇ ಕೆಲವು ಅಧ್ಯಾಪಕರುಗಳ ಹೆಸರುಗಳನ್ನು ಕೈಬಿಡಲಾಗುತ್ತಿದೆ ಎಂಬ ದೂರುಗಳು ಸಹ ವಿಶ್ವವಿದ್ಯಾಲಯಕ್ಕೆ ಕೇಳಿಬರುತ್ತುದೆ.ಅದುದರಿಂದ, ಅಧ್ಯಾಪಕರುಗಳ ಖಾಯಂಗೊಂಡ ದಿನಾಂಕವನ್ನು ಸೇವಾಪುಸ್ತಕದಲ್ಲಿ ಪರಿಶೀಲಿಸಿ ಸೇವಾ ವಿವರಗಳನ್ನು ಪ್ರಾಂಶುಪಾಲರು ಕಡ್ಡಾಯವಾಗಿ ಧೃಡೀಕರಿಸಿ ದಿನಾಂಕವನ್ನು 22–10–2024ರೊಳಗೆ ಈ ಕಛೇರಿಗೆ ಕಳುಹಿಸುವಂತೆ ಸೂಚಿಸಲಾಗಿದೆ. (ಖಾಯಂ ಅಧ್ಯಾಪಕರುಗಳು ಖಾಯಂ ಪೂರ್ವದಲ್ಲಿ ನಿರ್ವಹಿಸುತ್ತಿರುವ ಕಾಲೇಜಿನಲ್ಲಿಯೇ ಸತತವಾಗಿ 03 ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು). ಅಧ್ಯಾಪಕರುಗಳ ಹೆಸರುಗಳನ್ನು ಕಳುಹಿಸುವಾಗ ಯಾವುದೇ ಅಧ್ಯಾಪಕರ ಹೆಸರನ್ನು ಕೈಬಿಟ್ಟಲ್ಲಿ ಅಥವಾ ಕೊಟ್ಟ ಮಾಹಿತಿ ತಪ್ಪಾಗಿದ್ದಲ್ಲಿ ಅಥವಾ ವಿವರಗಳು ಅಪೂರ್ಣವಾಗಿದ್ದಲ್ಲಿ ಅಥವಾ ನಿಗದಿತ ದಿನಾಂಕದ ಒಳಗೆ ಕುಲಸಚಿವ (ಪರೀಕ್ಷಾಂಗ), ಮಂಡ್ಯ ವಿಶ್ವವಿದ್ಯಾಲಯ ಇವರಿಗೆ ತಲುಪದಿದ್ದಲ್ಲಿ ಇದಕ್ಕೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರೇ ನೇರ ಹೊಣಗಾರರಾಗಿರುತ್ತಾರೆ.

ಮೌಲ್ಯಮಾಪನ ಹಾಗೂ ಇತರೆ ಪರೀಕ್ಷಾ ಕಾರ್ಯಗಳು ಸುಗಮವಾಗಿ ನಡೆಯಲು ವಿವರಗಳು ತುಂಬಾ ಅವಶ್ಯಕವಾಗಿರುವುದರಿಂದ, ವಿವರಗಳನ್ನು ಕಳುಹಿಸಲು ಅದ್ಯತೆ ನೀಡಬೇಕೆಂದು ಕೋರಲಾಗಿದೆ.

15/10/24

ಕುಲಸಚಿವ (ಪರೀಕ್ಷಾಂಗ)
ಕುಲಸಚಿವರು (ಮೌಲ್ಯಮಾಪನ)
ಮಂಡ್ಯ ವಿಶ್ವವಿದ್ಯಾಲಯ
ಮಂಡ್ಯ-571401

ಪ್ರತಿ:

1. ಮಾನ್ಯ ಕುಲಪತಿಗಳ/ಕುಲಸಚಿವರು/ಆಪ್ತ ಶಾಖೆ.ಮಂಡ್ಯ ವಿಶ್ವವಿದ್ಯಾಲಯ ಮಂಡ್ಯ
2. ಕಛೇರಿ ಪ್ರತಿ.

**ನಮೂನೆ**

ಮಂಡ್ಯ ವಿಶ್ವವಿದ್ಯಾಲಯದ ವ್ಯಾಪ್ತಿ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರ ಜೇಷ್ಠತಾ ವಿವರ

ಕಾಲೇಜಿನ ಹೆಸರು : ಕಾಲೇಜಿನ ಕೋಡ್ ನಂ ದೂರವಾಣಿ ಸಂಖ್ಯೆ

1. ಹಾಲಿ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ವಿವರ

| ಕ್ರ ಸಂ | ಅಧ್ಯಾಪಕರ ಹೆಸರು | ಹುದ್ದೆ ಮತ್ತು ಬೋಧನಾ ವಿಷಯ | ಜನ್ಮ ದಿನಾಂಕ | ಖಾಯಂ ಉದ್ಯೋಗಕ್ಕೆ ಪ್ರಸ್ತುತ ಸಂಸ್ಥೆಗೆ ಸೇರಿದ ದಿನಾಂಕ | ಯು.ಜಿಸಿ ವೇತನ ಪಡೆಯುತ್ತಿದ್ದರೆಯೇ (ಹೌದು/ಇಲ್ಲ) | ಒಟ್ಟು ಪದವಿಮತ್ತು ಸ್ನಾತಕೋತ್ತರ ಪದವಿಯ ಸೇವಾ ಅನುಭವ **(Please mention if any break in service)** | ವಿ ವಿ ಪರೀಕ್ಷಾ ಕಾರ್ಯದಲ್ಲಿ ಲೋಪವೆಸಗಿದ್ದರೆ/ಶಿಕ್ಷೆಗೆ ಒಳಗಾಗಿದ್ದರೆ ಅವುಗಳ ವಿವರಗಳು | ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ವಿಳಾಸ (ಕಡ್ಡಾಯ) | ಮೂಲ ವೇತನ ಹಾಗೂ ಇತರೆ ಭತ್ಯೆ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |

2. ನಿಮ್ಮ ಕಾಲೇಜಿಗೆ ವರ್ಗಾವಣೆಗೊಂಡಿರುವ/ ನಿಮ್ಮ ಕಾಲೇಜಿನಿಂದ ವರ್ಗಾವಣೆಗೊಂಡ ಬೇರೆ ಕಾಲೇಜಿಗೆ ಹೋಗಿದ್ದಲ್ಲಿ ಅಂತಹ ಅಧ್ಯಾಪಕರುಗಳನ್ನು ಸಂಪೂರ್ಣ ವಿವರ ಹಾಗೂ ನಿವೃತ್ತಿ ಹೋಂದಿದ್ದಲ್ಲಿ/ ಆಕಾಲಿಕ ಮರಣ ಹೊಂದಿದ್ದಲ್ಲಿ ಅವರ ಹೆಸರು ವಿವರಗಳು.

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| | | | | | | | | | |

ಸ್ಥಳ
ದಿನಾಂಕ:

ಪ್ರಾಂಶುಪಾಲರ ಸಹಿ
ಮತ್ತು ಕಾಲೇಜಿನ ಮೊಹರು